**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 15 ಪ್ರಾ.ಸಾ. : 15**

| | |
|---|---|
| ಸಾಕ್ಷಿಯ ಹೆಸರು | : ಶ್ಯಾಮಲಾ |
| ತಂದೆಯ ಹೆಸರು | : ತಿಮ್ಮಣ್ಣ ನಾಯಕ |
| ವಯಸ್ಸು | : 58 ವರ್ಷ |
| ಉದ್ಯೋಗ | : ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಚೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ ಕಾರವಾರ |
| ವಾಸ | : ಕಾರವಾರ |

**ದಿನಾಂಕಃ 04-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಾರವಾರದಲ್ಲಿ ಅಕ್ಷರ ದಾಸೋಹ ವಿಭಾಗದಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿಯಾಗಿ 2012 ರಿಂದ 2016 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಆಗಸ್ಟ್ 2013 ರಲ್ಲಿ ಕ್ಷೀರಭಾಗ್ಯ ಯೋಜನೆ ನಮ್ಮ ರಾಜ್ಯದಲ್ಲಿ ಜಾರಿಗೆ ಬಂತು. ಆ ಯೋಜನೆಯಡಿಯಲ್ಲಿ ಶಾಲಾ ಮಕ್ಕಳಿಗೆ ಕೆನೆಭರಿತ ಹಾಲನ್ನು ವಾರಕ್ಕೆ ಮೂರು ದಿನ ಉಚಿತವಾಗಿ ನೀಡಲಾಗುತ್ತದೆ . ನಮ್ಮ ಜಿಲ್ಲೆಯಲ್ಲಿ 11 ತಾಲೂಕುಗಳು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತಿತ್ತು . ಅದು ಹಾಲಿನ ಪುಡಿ ಆಗಿತ್ತು. ಆ ಹಾಲಿನ ಪುಡಿ ಸರಬರಾಜನ್ನು ಕೆ ಎಂ ಎಫ್ ಧಾರವಾಡರವರಿಗೆ ಸರ್ಕಾರವೇ ನೀಡಿತ್ತು . ಅವರು ಎಲ್ಲಾ ಶಾಲೆಗಳಿಗೆ ಗುತ್ತಿಗೆದಾರರನ್ನು ನೇಮಕ ಮಾಡಿಕೊಂಡು ಅವರ ಮೂಲಕ ಹಾಲಿನ ಪುಡಿಯನ್ನು ವಿತರಣೆ ಮಾಡುತ್ತಿದ್ದರು. ಪ್ರತಿ ತಾಲೂಕಿಗೆ ಸಹಾಯಕ ನಿರ್ದೇಶಕರೊಬ್ಬರನ್ನು ಈ ಯೋಜನೆಯಡಿಯಲ್ಲಿ ನೇಮಕ ಮಾಡಲಾಗಿದೆ. ಅವರು ಬಿ ಶ್ರೇಣಿಯ ಮುಖ್ಯೋಪಾಧ್ಯಾಯರ ಶ್ರೇಣಿಯ ಅಧಿಕಾರಿಯಾಗಿರುತ್ತಾರೆ. ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಪರಿಚಯ ಇದ್ದಾರೆ. ಅವರ ಹೆಸರು ಗಣೇಶ ಅನಂತ ನಾಯ್ಕ . ಆರೋಪಿ ಕುಮಟಾ ತಾಲೂಕಿನ ಸಹಾಯಕ ನಿರ್ದೇಶಕರಾಗಿ ಈ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ಕುಮಟಾ ತಾಲೂಕಿನಲ್ಲಿ ಸುಮಾರು 230 ಸರ್ಕಾರಿ ಶಾಲೆಗಳು ಇದ್ದವು . ಅದಲ್ಲದೇ ಸುಮಾರು

25 ಕ್ಕಿಂತ ಹೆಚ್ಚು ಸರ್ಕಾರಿ ಅನುದಾನಿತ ಶಾಲೆಗಳು ಇದ್ದವು . ಆರೋಪಿಯು ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಶಾಲೆಗಳಿಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಿದ ಬಗ್ಗೆ ಹಾಗೂ ಹಾಲಿನ ಪುಡಿ ಶಾಲೆಗಳಿಗೆ ಸರಿಯಾಗಿ ಸರಬರಾಜು ಆದ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿದ್ದರು. ಕೆ ಎಂ ಎಫ್ ಧಾರವಾಡರವರು ನೇರವಾಗಿ ಶಾಲೆಗಳಿಗೆ ಗುತ್ತಿಗೆದಾರರ ಮೂಲಕ ಹಾಲಿನ ಪುಡಿ ಸರಬರಾಜು ಮಾಡುತ್ತಿತ್ತು . ಆಗ ಗುತ್ತಿಗೆದಾರರು ಸರಬರಾಜು ಮಾಡಿದ ಶಾಲೆಯ ಮುಖ್ಯೋಪಾಧ್ಯಯರ ಕಡೆಯಿಂದ ಆ ಬಗ್ಗೆ ಸ್ವೀಕೃತಿ ಪಡೆದು ಆ ಸ್ವೀಕೃತಿ ಸರಿ ಇದೆ ಎಂಬ ಬಗ್ಗೆ ಆರೋಪಿಯಿಂದ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ದೃಢೀಕರಣೆ ಮಾಡಿಸಿಕೊಂಡು ನಂತರ ಅದನ್ನು ಗುತ್ತಿಗೆದಾರರು ಕೆ ಎಂ ಎಫ್ ಸಂಸ್ಥೆಗೆ ಸಲ್ಲಿಸಬೇಕಾಗಿತ್ತು . ನಂತರ ಕೆ ಎಂ ಎಫ್ ನಿಂದ ಬಿಲ್ಲಿನ ಹಣ ಜಿಲ್ಲಾ ಪಂಚಾಯತನ ಅಕ್ಷರ ದಾಸೋಹ ವಿಭಾಗಕ್ಕೆ ಬರುತ್ತಿತ್ತು . ನಾನು ಸದರಿ ಬಿಲ್ಲುಗಳಿಗೆ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಾಹಕರಿಂದ ಸಹಿ ಪಡೆದು ಆಡಳಿತಾತ್ಮಕ ಆದೇಶ ಪಡೆದು ಬಿಲ್ಲಿನ ಹಣವನ್ನು ಗುತ್ತಿಗೆದಾರರಿಗೆ ಪಾವತಿ ಮಾಡುತ್ತಿದ್ದೆ. ಈ ಕೇಸಿನ ಫಿರ್ಯಾದುದಾರ ರಾಮಾ ಬೀರಪ್ಪ ನಾಯ್ಕ ಮೇಲ್ಕಂಡ ಯೋಜನೆಯಡಿಯಲ್ಲಿ ಗುತ್ತಿಗೆದಾರ ಆಗಿದ್ದರು. ಕೆ ಎಂ ಎಫ್ ಸಂಸ್ಥೆ ಸದರಿ ಫಿರ್ಯಾದುದಾರನಿಗೆ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಹಾಲಿನ ಪುಡಿ ವಿತರಣೆ ಗುತ್ತಿಗೆಯನ್ನು ನೀಡಿದ್ದರು. ಫಿರ್ಯಾದುದಾರರಿಗೆ ಕುಮಟಾ ತಾಲೂಕಿಗೆ ಆ ರೀತಿ ಗುತ್ತಿಗೆ ನೀಡಿದ್ದಾರೆ ಎಂದು ನಂತರ ತಾತ್ಕಾಲಿಕ ಆದೇಶವನ್ನು ಕೆ ಎಂ ಎಫ್ ಸಂಸ್ಥೆಯವರು ಕಳುಹಿಸಿರುತ್ತಾರೆ. ಫಿರ್ಯಾದುದಾರನಿಗೆ ಹಾಲು ಸರಬರಾಜು ಗುತ್ತಿಗೆ ಕೊಟ್ಟಿದ್ದ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ ನಂತರ ನನಗೆ ಗೊತ್ತಾಗಿರುತ್ತದೆ . ದಿನಾಂಕ 17.09.2013 ರಂದು ಆರೋಪಿಯನ್ನು ಲೋಕಾಯುಕ್ತ ಪೊಲೀಸ್ ನವರು ಬಂಧಿಸಿದ ವಿಚಾರ ನನಗೆ ಫೋನ್ ಮೂಲಕ ತಿಳಿಸಿದರು. ಆ ದಿನದ ಹಿಂದಿನ ರಾತ್ರಿ ಅವರನ್ನು ಬಂಧಿಸಿದ್ದಾರೆ ಎಂದು ನನಗೆ ತಿಳಿಸಿದರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ಈಗ ನನಗೆ ತೋರಿಸಿದ ದಿನಾಂಕ 21/23.09.2013 ರ ನೋಟರಿಕೃತ ದಾಖಲಾತಿ ಪ್ರಕಾರ ಶಿಕ್ಷಣಾಧಿಕಾರಿಯವರು ಅಕ್ಷರ ದಾಸೋಹ ಕಾರ್ಯಕ್ರಮ ಜಿಲ್ಲಾ ಪಂಚಾಯತ್ ಕಾರವಾರ ಅಂದರೆ ನನಗೆ ಕಾರವಾರ ಸಹಕಾರಿ ಹಾಲು ಉತ್ಪಾದಕರ ಸಂಘಗಳ

ಒಕ್ಕೂಟ ನಿಯಮಿತರವರಿಂದ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ನಂದಿನ ಹಾಲಿನ ಪುಡಿಯ ಸರಬರಾಜು ಮಾಡಲು ಸಾರಿಗೆ ಗುತ್ತಿಗೆದಾರರನ್ನು ನಿಯೋಜಿಸಿರುವ ಬಗ್ಗೆ ಆದೇಶವನ್ನು ನೀಡಿದ್ದಾರೆ ಎಂದರೆ ಹೌದು . ಸದರಿ ದಾಖಲಾತಿಯನ್ನು ನಿ.ಡಿ. 24 ಎಂದು ಗುರುತಿಸಲಾಯಿತು. ಅದರಲ್ಲಿ ತಾತ್ಕಾಲಿಕ ಗುತ್ತಿಗೆ ಆದೇಶ ಎಂದು ನಮೂದು ಇದೆ ಎಂದರೆ ಹೌದು . ಆ ಆದೇಶ ನನಗೆ ತಲುಪಿದ ದಿನಾಂಕ ನೆನಪಿಲ್ಲ ಆ ಪತ್ರದ ದಿನಾಂಕದ 4–5 ದಿನಗಳ ನಂತರ ನನಗೆ ಆ ಪತ್ರ ತಲುಪಿದೆ . ದಿನಾಂಕ 25.09.2013 ರಂದು ಕುಮಟಾ ತಾಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಆ ಪತ್ರ ತಲುಪಿರುವ ಬಗ್ಗೆ ಆ ಪತ್ರದ ಮೇಲೆ ಅವರ ಕಚೇರಿಯ ಮೊಹರು ಮತ್ತು ರುಜು ಇದೆ ಎಂದರೆ ಹೌದು . ಸರ್ಕಾರಿ ನೌಕರ ಕಾರ್ಯತತ್ಪರನಾಗಬೇಕಾದರೆ ಲಿಖಿತ ಆದೇಶ ಬರಬೇಕಾಗುತ್ತದೆ ಅಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಹೌದು . ಮೇಲ್ಕಂಡ ಪತ್ರದ ದಿನಾಂಕಕ್ಕೆ ಮೊದಲು ಇಂತಹವನಿಗೆ ಸಾರಿಗೆ ಗುತ್ತಿಗೆಯನ್ನು ಸದರಿ ಸಂಸ್ಥೆ ನೀಡಿದೆ ಎಂಬ ಬಗ್ಗೆ ನನ್ನ ಕಚೇರಿಯಲ್ಲಿ ಲಿಖಿತ ಮಾಹಿತಿ ಇರಲಿಲ್ಲ. ಇಂತಹವನಿಗೆ ಸಾರಿಗೆ ಗುತ್ತಿಗೆ ಕೊಟ್ಟಿದ್ದರು ಎಂದು ಆ ದಿನಾಂಕಕ್ಕೆ ಮೊದಲು ಮೌಖಿಕವಾಗಿ ಸಹ ಮಾಹಿತಿ ನನಗೆ ಇರಲಿಲ್ಲ. ಸರ್ಕಾರ ನೀಡುವ ಯಾವುದೇ ಗುತ್ತಿಗೆಯನ್ನು ಟೆಂಡರ್ ಪ್ರಕ್ರಿಯೆ ಮೂಲಕವೇ ನೀಡಬೇಕು ಎಂದರೆ ಹೌದು . ಹಾಲಿನ ಪುಡಿ ಸರಬರಾಜು ಮಾಡುವ ಯೋಜನೆ ಬಹುಕೋಟಿ ಯೋಜನೆ ಎಂದರೆ ಹೌದು . ಅದರಡಿಯಲ್ಲಿ ಕಾನೂನಾತ್ಮಕವಾಗಿ ಪಾಲನೆ ಮಾಡಬೇಕಾದ ನಿಯಮಗಳನ್ನು ಚಾಚೂತಪ್ಪದೇ ಮಾಡಬೇಕಾಗುತ್ತದೆ ಎಂದರೆ ಹೌದು . ಸರಬರಾಜನ್ನು ಶಾಲೆಗೆ ಮಾಡಿದ ಬಗ್ಗೆ ಆ ಶಾಲೆಯ ಮುಖ್ಯೋಪಾಧ್ಯಾಯರು ಸ್ವೀಕೃತಿ ನೀಡಿದ ಮೇಲೆ ಬಿ ಇ ಓ ರವರು ಅಥವಾ ಸಹಾಯಕ ನಿರ್ದೇಶಕರು ದೃಢೀಕರಣೆ ಮಾಡಬೇಕಾಗಿರುತ್ತದೆ. ಆರೋಪಿ ಆಗ ಸದರಿ ಸಹಾಯಕ ನಿರ್ದೇಶಕರು ಆಗಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು ಅವರಿಗೆ ಎಷ್ಟು ಸರಬರಾಜು ಆಗಿದೆ ಎಂದು ನೇರವಾಗಿ ಬಂದು ಬಿ ಇ ಓ ರವರಿಗೆ ಅಥವಾ ಸಹಾಯಕ ನಿರ್ದೇಶಕರಿಗೆ ವರದಿ ನೀಡಬೇಕಾಗಿರುತ್ತದೆ ಎಂದರೆ ಹೌದು . CRP (Cluster resource person) ರವರ ಮೂಲಕ ಶಾಲೆಯ ಮುಖ್ಯೋಪಾಧ್ಯಾಯರು ಬಿ ಇ ಓ ಅಥವಾ ಸಹಾಯಕ ನಿರ್ದೇಶಕರಿಗೆ ಆ ವರದಿಯನ್ನು ಕೊಡುತ್ತಾರೆ ನಂತರ ಅದನ್ನು ಬಿ ಇ ಓ ಅಥವಾ ಸಹಾಯಕ ನಿರ್ದೇಶಕರು

ದೃಢೀಕರಿಸಿ ಕೊಡುತ್ತಾರೆ. Cluster resource person ಸರ್ಕಾರಿ ನೌಕರ ಆಗಿರುತ್ತಾರೆ. ಶಿಕ್ಷಕರನ್ನೇ CRP ಆಗಿ ನೇಮಕ ಮಾಡಿರುತ್ತಾರೆ. ನಿ.ಡಿ. 7 ರಿಂದ 10 ಈಗ ತೋರಿಸಿದಂತಹ ನಮೂನೆಯಲ್ಲಿಯೇ ಹಾಲು ಪುಡಿ ಸರಬರಾಜು ಆದ ಬಗ್ಗೆ ವರದಿಯನ್ನು ಶಾಲೆಯಿಂದ ನೀಡಬೇಕಾಗಿರುತ್ತದೆ ಎಂದರೆ ಹೌದು . ಆ ನಮೂನೆ ಬಿಟ್ಟು ಬೇರೆ ರೀತಿ ಸಲ್ಲಿಸಿದರೆ ಅದು ಅಂಗೀಕಾರ ಆಗಿರುವುದಿಲ್ಲ ಎಂದರೆ ಬೇರೆ ರೀತಿ ಸಲ್ಲಿಸಿರುವುದನ್ನು ತೋರಿಸಿದರೆ ನಾನು ನೋಡಿ ಹೇಳಬಲ್ಲೆ. ಶಾಲೆಯ ಮುಖ್ಯೋಪಾಧ್ಯಾಯರು CRP ರವರ ಮೂಲಕ ಬಿ ಇ ಓ ಅಥವಾ ಉಪ ನಿರ್ದೇಶಕರಿಗೆ ಆ ವರದಿ ಸಲ್ಲಿಸಬೇಕಾಗಿದ್ದು ಅದನ್ನು ಬೇರೆ ಯಾರಾದರೂ ಸಲ್ಲಿಸಿದರೆ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಹೌದು . ಆ ಸಮಯದಲ್ಲಿ ಹಾಲು ಪುಡಿ ಪ್ರಾರಂಭದ ಹಂತದಲ್ಲಿದ್ದರಿಂದ ಅದನ್ನು ವಿತರಿಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸ್ವಲ್ಪ ಗೊಂದಲ ಇತ್ತು ಎಂದರೆ ಹೌದು . ನಿ.ಡಿ. 24 ಆದೇಶಕ್ಕೆ ಮೊದಲು ಗುತ್ತಿಗೆದಾರರಿಗೆ ಸರಬರಾಜಿಗೆ ಸದರಿ ಕೆ ಎಂ ಎಫ್ ಸಂಸ್ಥೆ ನೇಮಕ ಮಾಡಿಕೊಂಡಿದ್ದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ನಾನು ಕಾರವಾರ ಕರ್ನಾಟಕ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರ ಮುಂದೆ "ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಕುಮಟಾ ತಾಲೂಕಿನಲ್ಲಿರುವ 241 ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಗೆ ಹಾಲಿನ ಪುಡಿಯನ್ನು ಧಾರವಾಡದಿಂದ ತಂದು ವಿತರಿಸುವ ಸಾಗಾಣಿಕೆಯ ತಾತ್ಕಾಲಿಕ ಗುತ್ತಿಗೆಯನ್ನು ಧಾರವಾಡ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತ ಧಾರವಾಡದವರು ದಿನಾಂಕ 21.08.2013 ರಂದು ಕುಮಟಾ ತಾಲೂಕಿನ ಬಾಡಾ ಗ್ರಾಮ ನಿವಾಸಿ ಶ್ರೀ ರಾಮಾ ಬೀರಪ್ಪ ನಾಯ್ಕರವರಿಗೆ ನೀಡಿದ ವಿಷಯ ನನಗೆ ಗೊತ್ತಿದೆ." ಎಂದು ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನನಗೆ ಅದು ನನ್ನ ಹೇಳಿಕೆ ಅಲ್ಲ ಎಂದು ಅನಿಸುತ್ತದೆ . ಹೇಳಿಕೆಯ ಸದರಿ ಭಾಗವನ್ನು ನಿ.ಡಿ. 25 ಎಂದು ಗುರುತಿಸಲಾಯಿತು. ಆ ಹೇಳಿಕೆಯನ್ನು ದಿನಾಂಕ 14.02.2014 ರಂದು ದಾಖಲು ಮಾಡಿಕೊಂಡಿರುವುದಾಗಿ ಅದರಲ್ಲಿ ಇದ್ದು ಆ ವೇಳೆಗೆ ನನ್ನ ಕಚೇರಿಗೆ ನಿ.ಡಿ. 24 ಆದೇಶ ಬಂದಿತ್ತು ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ. ನಿ.ಡಿ. 24 ಆದೇಶವನ್ನು ದಿನಾಂಕ 21.09.2013 ರಂದು ಹೊರಡಿಸಿದ್ದು ನಾನು ಆರಕ್ಷಕ ಉಪಾಧೀಕ್ಷಕರ ಮುಂದೆ ದಿನಾಂಕ 21.08.2013 ರಂದು ರಾಮಾ ಬೀರಪ್ಪ ನಾಯ್ಕನಿಗೆ ತಾತ್ಕಾಲಿಕ ಗುತ್ತಿಗೆ ನೀಡಿದ ಬಗ್ಗೆ ಗೊತ್ತಾಗಿದೆ ಎಂದು ಹೇಳಿರುವುದಿಲ್ಲ.

3. ಆರೋಪಿಯನ್ನು ನನ್ನ ಸೇವಾವಧಿಯಲ್ಲಿ ಅನೇಕ ವರ್ಷಗಳಿಂದ ನಾನು ನೋಡಿದ್ದೇನೆ. ಆರೋಪಿ ವಿರುದ್ಧ ಈ ಪ್ರಕರಣ ಬಿಟ್ಟು ಯಾವುದೇ ದುರ್ವತನೆ ಪ್ರಕರಣ ನನ್ನ ಗಮನಕ್ಕೆ ಬಂದಿರುವುದಿಲ್ಲ. ಫಿರ್ಯಾದುದಾರ ರಾಮಾ ಬೀರಪ್ಪ ನಾಯ್ಕ ಹಿಂದೆ ಬಿಸಿಯೂಟ ಸಾಮಗ್ರಿಗಳನ್ನು ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಸರಬರಾಜು ಮಾಡುತ್ತಿದ್ದ ಎಂದರೆ ಹೌದು . ನಂತರ ಅವರಿಗೆ ಆ ಸರಬರಾಜನ್ನು ತಪ್ಪಿಸಿದ್ದರು ಎಂದರೆ ಟೆಂಡರ್ ನಲ್ಲಿ ನಂತರ ಅವರಿಗೆ ಸಿಕ್ಕಿರಲಿಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ